# ಸಾವು

• ಎನ್.ಎಸ್. ಚಿದಂಬರ ರಾವ್

"ನಿಮಗೇನು ಬೇಕೋ ಅದನ್ನೆಲ್ಲ ಅನುಭವಿಸಿಬಿಡಿ..... ನೀವು ಇನ್ನು ಕೇವಲ ಎರಡೇ ತಿಂಗಳು ಬದುಕಿರೋದು!" ಎಂದರು ಡಾಕ್ಟರು

ಸುಜಾತಾ ಕ್ಲಿನಿಕ್‌ನ ವೇಟಿಂಗ್ ರೂಮಿನಲ್ಲಿದ್ದ ಜನಗಳೆಲ್ಲ ಕ್ರಮೇಣ ಕರಗಿ, ನಾನು ಮತ್ತು ಗಣೇಶಯ್ಯ ಇಬ್ಬರೇ ಉಳಿದೆವು. ಸಂಜೆ ಐದೂವರೆಯಾಗಿತ್ತು; ಕ್ಲಿನಿಕ್ ಬಾಗಿಲು ಹಾಕಲು ಕೇವಲ ಇನ್ನರ್ಧಗಂಟೆ ಉಳಿದಿತ್ತು. ವೇಟಿಂಗ್ ರೂಮು ವಿಶಾಲವಾಗಿದ್ದುದಲ್ಲದೆ, ಪೀಠೋಪಕರಣಗಳಿಂದ ಸುಸಜ್ಜಿತವಾಗಿತ್ತು. ಸೋಫಾಗಳು, ಟೀಪಾಯ್‌ಗಳು, ಅವುಗಳ ಮೇಲಿದ್ದ ಹತ್ತಾರು ಪತ್ರಿಕೆಗಳು, ನಿಯತಕಾಲಿಕಗಳು. ಎದುರುಗೋಡೆಗೆ ದೊಡ್ಡ ಗಡಿಯಾರ ಒಂದೇ ಸಮನೆ ಶಬ್ದ ಮಾಡುತ್ತಿತ್ತು. ಐದೂವರೆಯ ಬಗ್ಗೆ ಅದು ಅದೇ ತಾನೇ 'ಢಣ್' – ಎಂದು ನಿನದಿಸಿದ ಕಂಪನ ಆ ವೇಟಿಂಗ್ ರೂಮಿನ ಅವಕಾಶದಲ್ಲೆಲ್ಲ ಅಲೆ ಅಲೆಯಾಗಿ ಇನ್ನೂ ಗುಂಯ್ ಗುಡುತ್ತಿತ್ತು. ಸುಮಾರು ಮೂವತ್ತು ನಲವತ್ತು



**'ಮಯೂರ'ದ 49 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. 1983ರ ಜನವರಿ ಮತ್ತು ಫೆಬ್ರುವರಿ ಸಂಚಿಕೆಗಳಲ್ಲಿ ಪ್ರಕಟವಾಗಿದ್ದ ಕತೆ ಈಗ ನಿಮ್ಮ ಮುಂದಿದೆ.**

**ಚಿತ್ರ: ಶ್ರೀನಿವಾಸ ಮೂರ್ತಿ**